ದಿನಾಂಕಃ **09.08.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **KRS** ವಕೀಲರಿಂದಃ

ಕುಂಟಣ್ಣ ನನ್ನ ತಾತ. ಕುಂಟಣ್ಣ ರವರ ಮಗನ ಹೆಸರು ಫಸಲು ಬೊಮ್ಮಯ್ಯ ಎಂದರೆ ಸರಿ. ಬಾಲಕೃಷ್ಣ ರವರ ತಂದೆ ಸದರಿ ಫಸಲು ಬೊಮ್ಮಯ್ಯ ಆಗಿರುತ್ತಾರೆ. ಹುಣಸೆ ಮರಕ್ಕ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸರ್ವೆ ನಂ.**13** ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ.**13** ರಲ್ಲಿ ಒಟ್ಟು **28** ಎಕರೆ **31** ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನಿನ ಪೈಕಿ **10** ಎಕರೆ ಯನ್ನು ಬಸಪ್ಪ ಮತ್ತು ಕರಿಬಸಪ್ಪ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಮಾರಾಟ ಮಾಡಿದ ನಂತರ **18** ಎಕರೆ **31** ಗುಂಟೆ ಜಮೀನು ನಮಗೆ ಉಳಿದಿರುತ್ತದೆ ಎಂದರೆ ಸರಿ. ಸದರಿ **18** ಎಕರೆ **31** ಗುಂಟೆ ಜಮೀನಿನ ಸರ್ವೆ ನಂಬರ್ ಈಗ ಏನಿದೆ ಎಂದು ನನಗೆ ಗೊತ್ತಿಲ್ಲ. ಬಸಪ್ಪ ಮತ್ತು ಕರಿಬಸಪ್ಪ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಬಸಪ್ಪ ಮತ್ತು ಕರಿಬಸಪ್ಪ ರವರಿಗೆ ಮಾಡಿಕೊಟ್ಟ ಕ್ರಯಪತ್ರದಲ್ಲಿ ಹುಣಸೆ ಮರದ ಬಗ್ಗೆ ನಮೂದಾಗಿರುತ್ತದೋ ಇಲ್ಲವೋ ನನಗೆ ಗೊತ್ತಿ್ಲ.

**18** ಎಕರೆ **31** ಗುಂಟೆ ಜಮೀನಿನ ಪೈಕಿ ದಿ.**07.04.1982** ರಲ್ಲಿ ಪ್ರಮೀಳಮ್ಮ ಕೋಂ ಕೊಟ್ರೇಶ್ ರವರಿಗೆ **6** ಎಕರೆ ಮಾರಾಟ ಮಾಡಿರುತ್ತೇನೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಪ್ರಮೀಳಮ್ಮ ರವರಿಗೆ ಮಾಡಿಕೊಟ್ಟ ಕ್ರಯಪತ್ರದಲ್ಲಿ ಹುಣಸೆ ಮರದ ಬಗ್ಗೆ ನಮೂದು ಮಾಡಿರುತ್ತೇ. ದಿ.**28.03.1985** ರಲ್ಲಿ ಅಂಜಿನಪ್ಪ ಬಿನ್ ಸಣ್ಣ ಗಂಗಪ್ಪ ರವರಿಗೆ **7** ಎಕರೆ **31** ಗುಂಟೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅಂಜಿನಪ್ಪ ರವರಿಗೆ ಮಾಡಿಕೊಟ್ಟ ಕ್ರಯ ಪತ್ರದಲ್ಲಿ ಹುಣಸೆ ಮರ ಉಳಿಸಿಕೊಂಡಿರುವುದಾಗಿ ನಮೂದು

ಮಾಡಿರುತ್ತೇನೆ. ದಿ.**28.03.1985** ರ ನಂತರ, ಮಾರಾಟ ಮಾಡಿದ ನಂತರ ಕೊನೆಯದಾಗಿ ನನ್ನ ಬಳಿ ಕೇವಲ **5** ಎಕರೆ ಜಮೀನು ಮಾತ್ರ ಉಳಿದುಕೊಂಡಿರುತ್ತದೆ ಎಂದರೆ ಸರ್. **5** ಎಕರೆ ಜಮೀನು ಉಳಿದುಕೊಂಡರು ಸಹ **6** ಎಕರೆ **31** ಗುಂಟೆ ಎಂದು ತಪ್ಪಾಗಿ ಪಹಣಿಯಲ್ಲಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ **8** ಹುಣಸೆ ಮರಗಳು ಇರುತ್ತವೆ. ಸದರಿ ಮರಗಳ ವಯಸ್ಸು **50** ವರ್ಷಕ್ಕೂ ಹೆಚ್ಚಾಗಿರುತ್ತದೆ. ನಾನು **8** ಹುಣಸೆ ಮರಗಳನ್ನು **50** ವರ್ಷಗಳ ಹಿಂದಿನಿಂದಲೂ ಬೆಳೆಸಿರುವುದಾಗಿ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿರುವ ಎಲ್ಲಾ ಜಮೀನುಗಳ ಖಾತೆ-ಪಹಣಿ ಖರೀದಿದಾರರ ಹೆಸರಿನಲ್ಲಿ ಈಗಲೂ ಬರುತ್ತಿದೆ ಎಂದರೆ ಸರಿ.

ದಿ.**28.03.1985** ರಂದು ಮಾರಾಟ ಮಾಡಿದ ದಿನದಿಂದ ಆಂಜಿನಪ್ಪ ಬಿನ್ ಸಣ್ಣ ಗಂಗಪ್ಪ ರವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಆಂಜಿನಪ್ಪ ಬಿನ್ ಸಣ್ಣ ಗಂಗಪ್ಪ ರವರು ದಿ.**16.03.1989** ರಲ್ಲಿ ನಾಗಪ್ಪ ಬಿನ್ ಕೆಂಚಪ್ಪ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ನಾಗಪ್ಪ ಬಿನ್ ಕೆಂಚಪ್ಪ ರವರ ಮರಣದ ನಂತರ ಅವರ ವಾರಸುದಾರರು ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ.**28.03.1985** ರಂದು ಮಾರಾಟ ಮಾಡಿದ ಜಮೀನಿನ ಉಳುಮೆಯನ್ನು ನಾನು ಮಾಡುತ್ತಿಲ್ಲ. ಆದರೆ ಜಮೀನುಗಳು ಅವರದ್ದು, ಮರ ನಮ್ಮದು. ನಾಗಪ್ಪ ಬಿನ್ ಕೆಂಚಪ್ಪ ರವರು ವಾರಸುದಾರರಾದ ಎಸ್.ಹನುಮಂತರಾಯಪ್ಪ ರವರು ಗೌರಮ್ಮ ಕೋಂ ಸಣ್ಣೀರಪ್ಪ ಮತ್ತು ಎಸ್.ನಾಗವೇಣಿ ಕೋಂ ರವೀಂದ್ರ ರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿದ ದಿನದಿಂದ ಗೌರಮ್ಮ ಮತ್ತು ನಾಗವೇಣಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ದಿ.**11.04.2016** ರಂದು ಗೌರಮ್ಮ ಮತ್ತು ನಾಗವೇಣಿ ಸದರಿ ಜಮೀನನ್ನು

ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಂತೆ ಪ್ರತಿವಾದಿಗಳ ಹೆಸರಿಗೆ **7** ಎಕರೆ **31** ಗುಂಟೆ ಜಮೀನಿನ ಪಹಣಿ ಬರುತ್ತಿದ್ದು, ಅವರೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗೌರಮ್ಮ ಮತ್ತು ನಾಗವೇಣಿ ಜಮೀನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.**13/1** ಮತ್ತು **13/2** ಪಹಣಿಯನ್ನು ನಾನು ನೋಡಿರುವುದಿಲ್ಲ. ದಿ.**28.03.1987** ರಲ್ಲಿ ನಾನು ನನ್ನ **5** ಎಕರೆ ಜಮೀನನ್ನು ಸಹ ಪಾರ್ವತಮ್ಮ ಕೋಂ ನಾರಾಯಣಪ್ಪ ರವರಿಗೆ ಮಾರಾಟ ಮಾಡಿರುತ್ತೇನೆ. ಸರ್ವೆ ನಂ. **13** ರಲ್ಲಿ **28** ಎಕರೆ **31** ಗುಂಟೆ ಜಮೀನನ್ನು ನಾನು ಬೇರೆ ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಮಾರಾಟ ಮಾಡಿದ ನಂತರ ಬೇರೆ ಬೇರೆಯವರಿಗೆ ಪೋಡಾಗಿರುತ್ತದೆ ಎಂದರೆ ನನಗೆ ಗುಾತ್ತಿಲ್ಲ. ಸರ್ವೆ ನಂ. **13** ರಲ್ಲಿ **21** ಎಕರೆ **31** ಗುಂಟೆ ಜಮೀನಿನಲ್ಲಿ ಯಾವುದೇ ಭಾಗದಲ್ಲಿ ನಾನು ಈಗ ವ್ಯವಸಾಯ ಮಾಡುತ್ತಿಲ್ಲ ಅಥವಾ ಉಳುಮೆ ಮಾಡುತ್ತಿಲ್ಲ ಎಂದರೆ ಸರಿ. ದಿ.**28.03.1987** ರಲ್ಲಿ ನಾನು ಪಾರ್ವತಮ್ಮ ಕೋಂ ನಾರಾಯಣಪ್ಪ ರವರಿಗೆ ಮಾರಾಟ ಮಾಡಿರುವ ಜಮೀನು ಸರ್ವೆ ನಂ.**13/2** ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿ.**19.02.2009** ರಲ್ಲಿ ಪಾರ್ವತಮ್ಮ ಕೋಂ ನಾರಾಯಣಪ್ಪ ರವರು ತಮ್ಮ **5** ಎಕರೆಯನ್ನು ಮುರಳಿ ಬಿನ್ ಕುರಿತಿಮ್ಮಣ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದಾದ ನಂತರ ಸರ್ವೆ ನಂ.**13** ಪೋಡಾಗಿ ಸರ್ವೆ ನಂ. **13/1** ಮತ್ತು **2** ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. **13** ರಲ್ಲಿ ಯಾರು ಯಾರು ಖರೀದಿ ಮಾಡಿರುತ್ತಾರೋ ಅವರು ಈಗ ಸ್ವಾಧೀನದಲ್ಲಿ ಇದ್ದು ಹಕ್ಕದಾರರು ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ